ಪತ್ರಿಕಾ ತುಣುಕುಗಳು
PAPER CLIPPINGS


ಶಾಖೆ / ವಿಷಯ : DEPARTMENT / SUBJECT: ಸಂಪಾದಕೀಯ (ರಾಜಕೀಯ ...)

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ    ದಿನಾಂಕ : DATE : 22/01/202.

# ಪರ್ಯಾಯ ವ್ಯವಸ್ಥೆಯ ಸಲಹೆ

## ಸಂವಿಧಾನ ಆಶಯದಂತೆ ವರ್ತಿಸಬೇಕು ಸ್ಪೀಕರ್

ಶಾಸಕರು ಅಥವಾ ಸಂಸದರ ಅನರ್ಹತೆ ನಿರ್ಧರಿಸುವ ಅಧಿಕಾರವನ್ನು ಸ್ಪೀಕರ್ ಬದಲಾಗಿ ಸ್ವತಂತ್ರ ಸಂಸ್ಥೆ ಅಥವಾ ಸಮಿತಿಗೆ ನೀಡುವ ಬಗ್ಗೆ ಪರಿಶೀಲನೆ ನಡೆಸುವಂತೆ ಸುಪ್ರೀಂ ಕೋರ್ಟ್ ಸಂಸತ್‌ಗೆ ಸಲಹೆ ಮಾಡಿದೆ. ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿನ ಶಾಸಕರ ಅನರ್ಹತೆ ಪ್ರಕರಣಗಳು ಚರ್ಚೆಯ ಮುನ್ನೆಲೆಗೆ ಬಂದಿರುವ ಹಿನ್ನೆಲೆಯಲ್ಲಿ ಈ ಸಲಹೆ ಮಹತ್ವದ್ದಾಗಿದೆ. ಬಹಳಷ್ಟು ಸಂದರ್ಭದಲ್ಲಿ ಸ್ಪೀಕರ್ ಹುದ್ದೆಯಲ್ಲಿ ಕುಳಿತವರ ಮೇಲೆ ಅನುಮಾನಗಳು ಮೂಡಿವೆ. ಅವರ ನಿರ್ಧಾರಗಳು ಸಾರ್ವಜನಿಕವಾಗಿ ಚರ್ಚೆಗೂ ಕಾರಣವಾಗಿವೆ. ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಈ ನಡೆ ಹೊಸ ಆಶಯಕ್ಕೆ ಕಾರಣವಾಗಿದೆ.



ಸ್ಪೀಕರ್ ಪಕ್ಷಕ್ಕೆ ಸೇರಿದ ವ್ಯಕ್ತಿಯೇ ಆಗಿರುವುದರಿಂದ ಶಾಸಕರು ಅಥವಾ ಸಂಸದರ ಅನರ್ಹತೆ ಕುರಿತು ಅವರಿಗಿರುವ ಅಧಿಕಾರದ ಬಗ್ಗೆ ಪುನರ್ ಪರಿಶೀಲನೆ ನಡೆಸುವ ಅಗತ್ಯವಿದೆ. ಅನರ್ಹತೆ ಪ್ರಶ್ನೆ ಉದ್ಭವಿಸಿದಾಗ ಅದನ್ನು ಸ್ಪೀಕರ್ ಬದಲು ಸ್ವತಂತ್ರ ಸಂಸ್ಥೆ ಅಥವಾ ಸಮಿತಿ ಇತ್ಯರ್ಥಪಡಿಸುವ ಬಗ್ಗೆ ಹಾಗೂ ಇದಕ್ಕೊಂದು ಶಾಶ್ವತ ವ್ಯವಸ್ಥೆಯನ್ನು ರೂಪಿಸುವ ಬಗ್ಗೆ ಪರಿಶೀಲನೆ ಮಾಡುವಂತೆ ಸಂಸತ್ ಚಿಂತನೆ ನಡೆಸಬೇಕು ಎಂದು ಪೀಠ ಅಭಿಪ್ರಾಯಪಟ್ಟಿರುವುದು ಸೂಕ್ತವಾಗಿದೆ ಮತ್ತು ಇದು ಈಗಿನ ತುರ್ತು ಅಗತ್ಯವಾಗಿದೆ.

ಸಾಂವಿಧಾನಿಕ ಹುದ್ದೆಗಳನ್ನು ಅಲಂಕರಿಸುವವರಿಗೆ ಸುಪ್ರೀಂ ಕೋರ್ಟ್ ನೀಡಿರುವ ಈ ಸಲಹೆಯು ಅನೇಕ ಪಾಠಗಳನ್ನೇ ಹೇಳಿದೆ. ಸ್ಪೀಕರ್‌ನಂಥ ಹುದ್ದೆಗಳಿಗೆ ತನ್ನದೇ ಆದ ಮಹತ್ವವಿದೆ; ಘನವಾದ ಉದ್ದೇಶವಿದೆ; ಸಾಂವಿಧಾನಿಕ ಮನ್ನಣೆ ಇದೆ. ಅರೆ ನ್ಯಾಯಿಕ ಸ್ಥಾನಮಾನ ಹೊಂದಿರುವ ಆ ಹುದ್ದೆಯನ್ನು ಅಲಂಕರಿಸುವವರು ನ್ಯಾಯಬದ್ಧ ಮತ್ತು ನಿಷ್ಪಕ್ಷಪಾತವಾಗಿ ವರ್ತಿಸಬೇಕಾಗುತ್ತದೆ. ಈ ಹುದ್ದೆಗೆ ಆಯ್ಕೆಯಾಗುವ ವ್ಯಕ್ತಿ ಕೂಡ ರಾಜಕೀಯ ಪಕ್ಷದ ಹಿನ್ನೆಲೆಯಿಂದಲೇ ಬಂದಿದ್ದರೂ ಅಧಿಕಾರ ಸ್ವೀಕರಿಸಿದ ತಕ್ಷಣವೇ ಅವರು ಸಂವಿಧಾನದ ಪರಿಪಾಲಕರಾಗಬೇಕು; ಸಂವಿಧಾನದ ಆಶಯಗಳಿಗೆ ಅನುಗುಣವಾಗಿಯೇ ನಡೆದುಕೊಳ್ಳಬೇಕು; ರಾಜಕೀಯೇತರ ವ್ಯಕ್ತಿಯಾಗಿ ಬದಲಾಗಬೇಕಾಗುತ್ತದೆ. ಆದರೆ, ಬಹಳಷ್ಟು ಸಂದರ್ಭದಲ್ಲಿ ರೀತಿಯಲ್ಲಾಗುವುದಿಲ್ಲ ಎಂದು ಈ ಹಿಂದಿನ ಎಲ್ಲ ಉದಾಹರಣೆಗಳನ್ನು ಮುಂದಿಟ್ಟುಕೊಂಡು ಘಂಟಾಘೋಷವಾಗಿ ಹೇಳಬಹುದು.

ಎಲ್ಲಕ್ಕಿಂತ ಹೆಚ್ಚಾಗಿ ಪಕ್ಷಾಂತರ ನಿಷೇಧ ಕಾಯಿದೆಯು ಘನ ಉದ್ದೇಶವನ್ನು ಹೊಂದಿದೆ. ಪ್ರಜಾಪ್ರಭುತ್ವ ಅಪಹಾಸ್ಯಕ್ಕೆ ಈಡಾಗದಂತೆ ತಡೆಯುವ ನಿಯಮಗಳನ್ನು ಹೊಂದಿದೆ. ಸರಕಾರಗಳು ಅಸ್ಥಿರಗೊಳ್ಳುವುದನ್ನು ಈ ಕಾಯಿದೆ ತಡೆಯುವ ಕೆಲಸವನ್ನು ಮಾಡುತ್ತದೆ. ಆದರೂ ಕಾಯಿದೆಯ ಮೂಲ ಉದ್ದೇಶಕ್ಕೆ ಕೊಡಲಿ ಪೆಟ್ಟು ನೀಡುವಂಥ ಅನೇಕ ತೀರ್ಮಾನಗಳನ್ನು ನೀಡಿರುವ ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ. ಇದು ಕೇವಲ ಮಣಿಪುರದ ಸ್ಪೀಕರ್‌ಗೆ ಸಂಬಂಧಿಸಿದಂತೆ ಹೇಳುತ್ತಿಲ್ಲ. ನಮ್ಮ ರಾಜ್ಯವೂ ಸೇರಿದಂತೆ ದೇಶದ ಅನೇಕ ರಾಜ್ಯಗಳಲ್ಲಿ ಸ್ಪೀಕರ್, ಪಕ್ಷಾಂತರ ನಿಷೇಧ ಕಾಯಿದೆ ಹಾಗೂ ಸಂವಿಧಾನದ ಮೂಲ ಉದ್ದೇಶಗಳನ್ನು ಗಾಳಿಗೆ ತೂರಿ ವರ್ತಿಸಿದ ಪ್ರಕರಣಗಳು ಇತಿಹಾಸದ ಪುಟಗಳಲ್ಲಿವೆ. ಅನೇಕ ಬಾರಿ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶಿಸಿ ಕಾಯಿದೆ ಅನುಸಾರ ನಡೆದುಕೊಳ್ಳುವಂತೆ ಚಾಟಿ ಬೀಸಿದ್ದನ್ನು ಕಾಣಬಹುದು. ಹಾಗಾಗಿ, ಕಾಯಿದೆ ಮೂಲ ಉದ್ದೇಶವನ್ನು ಕಾಯ್ದುಕೊಳ್ಳುವುದು ಮುಖ್ಯವಾಗುತ್ತದೆ. ಎಷ್ಟೋ ಸಂದರ್ಭದಲ್ಲಿ ಕಾಯಿದೆಗಳನ್ನು ರೂಪಿಸುವಾಗ ಗೊಂದಲ ಉಂಟಾದಾಗ ನಾವು ಸಂವಿಧಾನ ಪೀಠಿಕೆಯನ್ನು ಪರಾಮರ್ಶಿಸುತ್ತೇವೆ. ಯಾಕೆಂದರೆ, ಸಂವಿಧಾನದ ಒಟ್ಟು ಮೂಲ ಆಶಯವನ್ನು ಪೀಠಿಕೆ ಒಳಗೊಂಡಿದೆ. ಹಾಗೆಯೇ, ಯಾವುದೇ ಕಾಯಿದೆಯ ಅನುಸಾರ ನಿರ್ಧಾರ ಕೈಗೊಳ್ಳುವಾಗ ಆ ಕಾಯಿದೆ ಉದ್ದೇಶಕ್ಕೆ ಬಾಧಕವಾಗದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಸಾಂವಿಧಾನಿಕ ಹುದ್ದೆಗಳನ್ನು ಅಲಂಕರಿಸಿದವರ ಮೇಲಿರುತ್ತದೆ. ಒಂದು ವೇಳೆ ಅವರು ತಮ್ಮ ಈ ಕರ್ತವ್ಯವನ್ನು ಮರೆತು ಬಿಟ್ಟರೆ ಪರ್ಯಾಯ ವ್ಯವಸ್ಥೆಗಳತ್ತ ಹುಡುಕಾಟ ಅನಿವಾರ್ಯವಾಗುತ್ತದೆ. ಈಗ ಸುಪ್ರೀಂ ಕೋರ್ಟ್ ಅಂಥದ್ದೇ ಪರ್ಯಾಯ ವ್ಯವಸ್ಥೆಯನ್ನು ಕಂಡುಕೊಳ್ಳುವಂತೆ ಸಂಸತ್ತಿಗೆ ಸೂಚಿಸಿದೆ. ಆದರೆ, ಈ ರೀತಿಯ ಬೆಳವಣಿಗೆಗಳಾಗಬಾರದು. ಹುದ್ದೆಗಳ ಘನತೆಯನ್ನು ಕಾಪಾಡಬೇಕು. ಸಾಂವಿಧಾನಿಕ ಹುದ್ದೆಗಳಲ್ಲಿರುವವರು ಜವಾಬ್ದಾರಿಯುತವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕು.

7